<u>ದಿನಾಂಕಃ **13-02-2025** ರಂದು ಸಾಕ್ಷಿಯನ್ನು ಪುನಃ ಕರೆಸಿ ಪ್ರಮಾಣವಚನ ಮಾಡಿಸಲಾಯಿತು.</u>

<u>ಮುಂದುವರಿದ ಪಾಟೀ ಸವಾಲುಃ ವಾದಿ ಪರ ಶ್ರೀ ಎಲ್ ವಿ ಎಂ ವಕೀಲರಿಂದಃ</u>

8. ನನ್ನ ಹಿಸ್ಸೆಗೆ ಬಂದ ಜಮೀನನ ಮೇಲೆ ನಾನು ಉತ್ತಮೇಶ್ವರದ ಸ್ಟೇಟ್ ಬ್ಯಾಂಕ್ ನಲ್ಲಿ ರೂ.ಒಂದೂವರೆ ಲಕ್ಷ ಸಾಲ ಮಾಡಿರುತ್ತೇನೆ. ನಾನು 1997 ರಿಂದ 2000 ನೇ ಇಸವಿಯ ವರೆಗೆ ಕುಟುಂಬದ ವ್ಯವಹಾರ ನೋಡಿಕೊಂಡ ಸಂಬಂಧ ಲೆಕ್ಕಪತ್ರಗಳನ್ನು ಇಟ್ಟಿರುವುದಿಲ್ಲ. ನಾನು ಒಟ್ಟು ಕುಟುಂಬದಲ್ಲಿ ಯಜಮಾನನಾಗಿ ಕೆಲಸ ಮಾಡುವಾಗ ಯಾವುದೇ ಲೆಕ್ಕಪತ್ರ ಇಟ್ಟಿರುವುದಿಲ್ಲ. ನಾನು ಕುಟುಂಬ ನಿರ್ವಹಣೆ ಮಾಡುವ ಕಾಲಕ್ಕೆ ವಾದಿ ಮತ್ತು ಉಳಿದ ಪ್ರತಿವಾದಿಯರು ಹಣಕಾಸಿನ ಸಹಾಯ ಮಾಡಿದ್ದರು ಎಂದರೆ ಸರಿಯಲ್ಲ. ನಮ್ಮ ತಾಯಿಯ ಹಿಸ್ಸೆಗೆ ಬಂದ ಸ.ನಂ.64 ರ ಜಮೀನನ್ನು ಆಧಾರ ಮಾಡಿ ಎಸ್ ಬಿ ಐ ಬೆಳವಿನಕೊಡಿಗೆಯಲ್ಲಿ ಸಾಲ ಮಾಡಿದ್ದೆ ಎಂದರೆ ಸರಿ . ಸಾಕ್ಷಿಗೆ ಒಂದು ಭಾವಚಿತ್ರ ಹಾಗೂ ಸಾಲದ ಅರ್ಜಿ ತೋರಿಸಲಾಗಿ ನಿಮ್ಮ ತಾಯಿ ಸ್ವತಃ ಬ್ಯಾಂಕಿಗೆ ಹೋಗಿ ಸಾಲ ಪಡೆದಿರುವುದಿಲ್ಲ ಎಂದರೆ ಸರಿ . ಸದರಿ ಸಾಲದ ಅರ್ಜಿಗೆ ಹಾಗೂ ಬ್ಯಾಂಕಿನ ಎಲ್ಲಾ ದಾಖಲೆಗೆ ನಾನೇ ಸಹಿ ಮಾಡಿರುತ್ತೇನೆ ಎಂದರೆ ಸರಿ . ನಾನು ಸಾಲ ಪಡೆಯುವ ಕಾಲಕ್ಕೆ ನಮ್ಮ ತಾಯಿಯ ಆಧಾರ್ ಕಾರ್ಡನ್ನು ಹಾಜರುಪಡಿಸಿದ್ದೆ ಎಂದರೆ ಸರಿ . ಸಾಕ್ಷಿ ಸದರಿ ಸಾಲದ ಅರ್ಜಿ ಮತ್ತು ಆಧಾರ್ ಕಾರ್ಡ್ ಪ್ರತಿಗಳನ್ನು ನೋಡಿ ಗುರುತಿಸಿದ್ದು ಸದರಿ ದಾಖಲೆಗಳನ್ನು ನಿಪಿ 34 ಮತ್ತು 35 ಎಂದು ಗುರುತಿಸಲಾಯಿತು. ಆಧಾರ್ ಕಾರ್ಡಿನಲ್ಲಿರುವ ವಿಳಾಸ ನಮ್ಮ ಮೂಲ ಗ್ರಾಮದ್ದು ಎಂದರೆ ಸರಿ . ಸಾಕ್ಷಿ ಮುಂದುವರಿದು ನಮ್ಮ ತಾಯಿ ಕೊಪ್ಪದಲ್ಲಿ ವಾಸ ಇದ್ದರು ಎಂದು ಉತ್ತರಿಸಿರುತ್ತಾರೆ. ನಮ್ಮ ತಾಯಿ ಕೊಪ್ಪದಲ್ಲಿ ವಾಸ ಇರುವ ಬಗ್ಗೆ ನಾನು ವಾಸ ದೃಢೀಕರಣ ಪತ್ರ ಹಾಜರುಪಡಿಸಿರುವುದಿಲ್ಲ. ಆಧಾರ್ ಕಾರ್ಡ್ ಹಾಗೂ ಬ್ಯಾಂಕಿಗೆ ಕೊಟ್ಟ ದೂರವಾಣಿ ಸಂಖ್ಯೆ ನನ್ನದು ಇರುತ್ತದೆ ಎಂದರೆ ಸರಿ .

9. ನಾನು ನಮ್ಮ ತಾಯಿಯ ಹೆಸರಿನಲ್ಲಿ ಸುಮಾರು ರೂ.ಒಂದು ಲಕ್ಷ ಸಾಲ ಪಡೆದಿರುತ್ತೇನೆ. ನಾನು ಯಾವಾಗ ಸಾಲ ತೀರುವಳಿ ಮಾಡಿರುತ್ತೇನೆ ಎಂಬುದರ ಬಗ್ಗೆ ದಾಖಲೆಯನ್ನು ಹಾಜರುಪಡಿಸಿರುತ್ತೇನೆ. ಈ ದಾವೆಯನ್ನು ದಾಖಲಿಸಿದ ನಂತರ

2023 ರಲ್ಲಿ ನಾನು ಸಾಲ ಮರುಪಾವತಿ ಮಾಡಿರುತ್ತೇನೆ ಎಂದರೆ ಸರಿ . ನಾನು ಸಾಲ ಪಡೆಯಲು ನನ್ನ ತಾಯಿ ನನಗೆ ನೋಂದಣಿ ಜಿ ಪಿ ಎ ಪತ್ರ ಬರೆದು ಕೊಟ್ಟಿರುವುದಿಲ್ಲ. ನಾನು ಅನೋಂದಾಯಿತ ಜಿ ಪಿ ಎ ಮೇಲೆ ಬ್ಯಾಂಕಿನಲ್ಲಿ ಸಾಲ ಪಡೆದಿರುತ್ತೇನೆ. ನಾನು ಸುಳ್ಳು ದಾಖಲೆಯನ್ನು ಸೃಷ್ಠಿ ಮಾಡಿ ನಮ್ಮ ತಾಯಿಯ ಹೆಸರಿನಲ್ಲಿ ಸಾಲ ಪಡೆದಿರುತ್ತೇನೆ ಎಂದರೆ ಸರಿಯಲ್ಲ. ಸಾಕ್ಷಿಗೆ 5 ಫೋಟೋಗಳನ್ನು ತೋರಿಸಲಾಗಿ ಸದರಿ 5 ಫೋಟೋಗಳಲ್ಲಿ ಕಾಣಿಸುತ್ತಿರುವವರು ತಮ್ಮ ತಾಯಿ ಎಂದು ಒಪ್ಪಿಕೊಂಡಿದ್ದು ಸದರಿ ಫೋಟೋಗಳನ್ನು ನಿಪಿ 36 ರಿಂದ ನಿಪಿ40 ಎಂದು ಗುರುತಿಸಲಾಯಿತು.

10. ನಮ್ಮ ತಾಯಿಯ ಕಾಲಿಗೆ ಗ್ರಾಂಗ್ರಿನ್ ಆಗಿತ್ತು ಎಂದರೆ ಸರಿಯಲ್ಲ. ನಮ್ಮ ತಾಯಿ ಓಡಾಡುವ ಸ್ಥಿತಿಯಲ್ಲಿ ಇರಲಿಲ್ಲ, ಅವರು ವೀಲ್ ಚೇರ್ ನಲ್ಲಿ ಹೋಗುತ್ತಿದ್ದರು ಎಂದರೆ ಸರಿಯಲ್ಲ. ನಮ್ಮ ತಾಯಿಯ ಕಾಲಿಗೆ ಆದ ಗಾಯದ ಬಗ್ಗೆ ನಾನು ಚಿಕಿತ್ಸೆಯನ್ನು ಕೊಡಿಸಿರುತ್ತೇನೆ. ನಾನು ಡಾ.ಮೋಹನ್ ಬಿ ಎಸ್ ಶೆಟ್ಟಿ ವೈದ್ಯರ ಬಳಿ ನಮ್ಮ ತಾಯಿಗೆ ಚಿಕಿತ್ಸೆ ಕೊಡಿಸಿರುತ್ತೇನೆ. ಆ ಬಗ್ಗೆ ದಾಖಲೆಗಳು ಇರುವುದಿಲ್ಲ. ನಾನು ನನ್ನ ತಾಯಿ ಅನಾರೋಗ್ಯ ಪೀಡಿತರಾಗಿದ್ದಾಗ ಯಾವುದೇ ಚಿಕಿತ್ಸೆ ಕೊಡಿಸಿರುವುದಿಲ್ಲ, ಆದ ಕಾರಣ ನನ್ನ ಬಳಿ ಯಾವುದೇ ದಾಖಲೆಗಳು ಇರುವುದಿಲ್ಲ ಎಂದರೆ ಸರಿಯಲ್ಲ. ವಾದಿ ನಮ್ಮ ತಾಯಿಗೆ ಚಿಕ್ಕಮಗಳೂರಿನ ಆಸ್ಪತ್ರೆಯಲ್ಲಿ ಕಿವಿ ಕೇಳಿಸದ ಕಾರಣ ಚಿಕಿತ್ಸೆ ಕೊಡಿಸಿರುತ್ತಾರೆ ಎಂದರೆ ಸರಿಯಲ್ಲ. ಸಾಕ್ಷಿ ಮುಂದುವರಿದು ನಾನು ಆ ದಾಖಲೆಯನ್ನು ಒಪ್ಪುವುದಿಲ್ಲ ಎಂದು ಉತ್ತರಿಸಿರುತ್ತಾರೆ. ಚಿಕ್ಕಮಗಳೂರಿನಲ್ಲಿ ಅರಳಗುಪ್ಪೆ ಮಲ್ಲೇಗೌಡ ಜಿಲ್ಲಾ ಆಸ್ಪತ್ರೆ ಇರುವ ಬಗ್ಗೆ ನನಗೆ ಗೊತ್ತಿರುವುದಿಲ್ಲ.

11. ಎಸ್ ಬಿ ಐ ಹೊರತುಪಡಿಸಿ ನಮ್ಮ ತಾಯಿ ನಾರ್ವೆಯ ಕರ್ನಾಟಕ ಬ್ಯಾಂಕ್ ನಲ್ಲಿ ಖಾತೆಯನ್ನು ಹೊಂದಿದ್ದರು. ಆ ಖಾತೆಯನ್ನು ನಮ್ಮ ತಾಯಿ ಮೊದಲೇ ಹೊಂದಿದ್ದರು. ನಮ್ಮ ತಾಯಿ ಹೊಂದಿದ ಕರ್ನಾಟಕ ಬ್ಯಾಂಕ್ ಖಾತೆಗೆ ನನ್ನ ದೂರವಣಿ ಸಂಖ್ಯೆ ಕೊಟ್ಟಿರುತ್ತೇನೆ ಎಂದರೆ ಸರಿ . ಸದರಿ ಖಾತೆಗೆ ಎ ಟಿ ಎಂ ಸೌಲಭ್ಯ ಇತ್ತು ಎಂದರೆ ಸರಿ . ಸದರಿ ಎಟಿಎಂ ಕಾರ್ಡ್ನನ್ನು ನಾನು ಬಳಸುತ್ತಿದ್ದೆ ಎಂದರೆ ಸರಿಯಲ್ಲ. ನಾನು ಕೊಪ್ಪದ ಶಂಕರ್ ಮಿಲ್ ಪೆಟ್ರೋಲ್ ಬಂಕ್ ನಲ್ಲಿ ಪೆಟ್ರೋಲ್ ಹಾಕಿಸಿಕೊಂಡು ನಮ್ಮ ತಾಯಿಯ ಎ ಟಿ ಎಂ ಕಾರ್ಡಿನ ಮುಖಾಂತರ ಹಣ ಪಾವತಿ ಮಾಡಿರುತ್ತೇನೆ ಎಂದರೆ ಸರಿಯಲ್ಲ. ನಮ್ಮ

ತಾಯಿಯ ಬಳಿ ಯಾವುದೇ ವಾಹನ ಇರಲಿಲ್ಲ. ನನ್ನ ಬಳಿ ಬೈಕ್ ಇರುತ್ತದೆ. ನಾನು ಶಂಕರ್ ಮಿಲ್ ಪೆಟ್ರೋಲ್ ಬಂಕ್ ನಲ್ಲಿ ಪೆಟ್ರೋಲನ್ನು ಹಾಕಿಸುತ್ತೇನೆ. ನಾನು ನನ್ನ ತಾಯಿಯ ಎ ಟಿ ಎಂ ಕಾರ್ಡನ್ನು ಬಳಸಿಕೊಂಡು ಶಂಕರ್ ಮಿಲ್ ಪೆಟ್ರೋಲ್ ಬಂಕ್ ನಲ್ಲಿ ಪೆಟ್ರೋಲ್ ಹಾಕಿಸಿಕೊಂಡಿರುತ್ತೇನೆ ಎಂದರೆ ಸರಿಯಲ್ಲ. ನನ್ನ ತಾಯಿ ತೀರಿಕೊಂಡ ನಂತರ ಸಹ ನಾನು ಸದರಿ ಎ ಟಿ ಎಂ ಕಾರ್ಡನ್ನು ದುರ್ಬಳಕೆ ಮಾಡಿಕೊಳ್ಳುತ್ತಾ ಇರುತ್ತೇನೆ ಎಂದರೆ ಸರಿಯಲ್ಲ.

12. ನಾನು 10 ವರ್ಷ ವಯಸ್ಸಿನವನಿದ್ದಾಗಿನಿಂದ ಕನ್ನಡಕ ಬಳಸುತ್ತಾ ಇರುತ್ತೇನೆ. ನಾನು ರೀಡಿಂಗ್ ಮತ್ತು ಪವರ್ ಗ್ಲಾಸ್ ಅನ್ನು ಬಳಸುತ್ತಿದ್ದೇನೆ. ನಾನು ವೈದ್ಯರ ಬಳಿ ಪರೀಕ್ಷಿಸಿ ಕನ್ನಡಕವನ್ನು ಖರೀದಿ ಮಾಡಿರುತ್ತೇನೆ. ನಮ್ಮ ತಾಯಿಗೆ ನಾನು ಕನ್ನಡಕವನ್ನು ಕೊಡಿಸಿರುವುದಿಲ್ಲ. ವಾದಿ ನಮ್ಮ ತಾಯಿಗೆ ಮಿಂಟೋ ಆಸ್ಪತ್ರೆಯಲ್ಲಿ ಕಣ್ಣಿನ ಪರೀಕ್ಷೆ ಮಾಡಿಸಿರುತ್ತಾರೆ ಎಂದರೆ ಸರಿಯಲ್ಲ. ನಾನು ಎಂದಿಗೂ ನಮ್ಮ ತಾಯಿಯನ್ನು ಮಿಂಟೋ ಆಸ್ಪತ್ರೆಗೆ ಕರೆದುಕೊಂಡು ಹೋಗುವ ಪರಿಸ್ಥಿತಿ ಬಂದಿರುವುದಿಲ್ಲ. ನಮ್ಮ ತಾಯಿ ಕಿವಿ ಕೇಳಿಸದ ಸಂಬಂಧ ಯಾವುದೇ ಮೆಷಿನ್ ಅನ್ನು ಹಾಕಿರುವುದಿಲ್ಲ. ವಾದಿ ನಮ್ಮ ತಾಯಿಗೆ ತುಮಕೂರಿನಲ್ಲಿ ದಿನಾಂಕಃ15.10.2012 ರಂದು ಚಿಕಿತ್ಸೆ ಕೊಡಿಸಿರುತ್ತಾರೆ ಎಂದರೆ ಸರಿಯಲ್ಲ. ನಿಪಿ 28 ರಂತೆ ವೈದ್ಯರು ವರದಿ ಕೊಟ್ಟಿರುತ್ತಾರೆ ಎಂದರೆ ಸಾಕ್ಷಿ ವರದಿ ಕೊಟ್ಟಿರಬಹುದು ಆದರೆ ಕರೆದುಕೊಂಡು ಹೋಗಿರುವುದಿಲ್ಲ ಎಂದು ಉತ್ತರಿಸಿರುತ್ತಾರೆ. ವಾದಿ ಮಂಗಳೂರಿನಲ್ಲಿ ನಮ್ಮ ತಾಯಿಗೆ ಕಿವಿ ಸಂಬಂಧ ಚಿಕಿತ್ಸೆ ಕೊಡಿಸಿರುತ್ತಾರೆ ಎಂದರೆ ಸರಿಯಲ್ಲ. ನಮ್ಮ ತಾಯಿ ತೀರ್ಥಹಳ್ಳಿಯ ಕಿರಣ್ ಹೆಲ್ತ್ ಕೇರ್ ನಲ್ಲಿ ಅವರು ಅನಾರೋಗ್ಯ ಇದ್ದಾಗ ಚಿಕಿತ್ಸೆಗಾಗಿ ಹೋಗುತ್ತಿದ್ದರು ಎಂದರೆ ಸರಿಯಲ್ಲ. ಅದೇ ರೀತಿ ಮೇಳಿಗೆ ಆಸ್ಪತ್ರೆಯಲ್ಲಿ ನಮ್ಮ ತಾಯಿ ಒಳರೋಗಿಯಾಗಿ ಚಿಕಿತ್ಸೆ ಪಡೆದುಕೊಂಡಿರುತ್ತಾರೆ ಎಂದರೆ ಸರಿಯಲ್ಲ. 2015 ರಿಂದಲೂ ನಮ್ಮ ತಾಯಿ ಚಿಕಿತ್ಸೆ ಪಡೆಯುತ್ತಿದ್ದು ಅವರನ್ನು ಡಾ.ಗಣೇಶ್ ನಾಯ್ಡು ಎಂಬ ವೈದ್ಯರು ನೋಡಿಕೊಳ್ಳುವ ಸಂಬಂಧ ಸರ್ಟಿಫಿಕೇಟ್ ಕೊಟ್ಟಿರುತ್ತಾರೆ ಎಂದರೆ ಸರಿಯಲ್ಲ. ಪ್ರತಿವಾದಿ 3 ರವರು ನಮ್ಮ ತಾಯಿಗೆ ಚಿಕಿತ್ಸೆ ಕೊಡಿಸಿದ್ದು ನಾನು ಯಾವತ್ತೂ ನಮ್ಮ ತಾಯಿಗೆ ಚಿಕಿತ್ಸೆ ಕೊಡಿಸಿರುವುದಿಲ್ಲ ಎಂದರೆ ಸರಿಯಲ್ಲ. 2022-23 ರಲ್ಲಿ ಪಟ್ಟಣ

ಪಂಚಾಯ್ತಿಯಲ್ಲಿ ದಾವಾ ಆಸ್ತಿ ಬಿ ನಮ್ಮ ತಾಯಿಯ ಹೆಸರಿನಲ್ಲಿ ಇತ್ತು ಎಂದರೆ ಸರಿಯಲ್ಲ. ಆ ಸಂಬಂಧ ವಾದಿಯೇ ಕಂದಾಯ ಕಟ್ಟಿರುತ್ತಾರೆ ಎಂದರೆ ಸರಿಯಲ್ಲ.

(ಈ ಹಂತದಲ್ಲಿ ಮುಂದುವರಿದ ಪಾಟೀ ಸವಾಲಿಗೆ ಸಮಯ ಕೋರಿದ್ದು ಸಮಯ ನೀಡಲಾಯಿತು.)

(ತೆರೆದ ನ್ಯಾಯಾಲಯದಲ್ಲಿ ಸಾಕ್ಷಿಯ ಹೇಳಿಕೆಯಂತೆ ನನ್ನ ಉಕ್ತಲೇಖನಕ್ಕೆ ಬೆರಳಚ್ಚು ಮಾಡಲಾಗಿದೆ.)

ಓ ಹೇ ಕೇ ಸ ಇ ಎ ಒ

ಸಹಿ/-
ಹಿರಿಯ ಸಿವಿಲ್ ನ್ಯಾಯಾಧೀಶರುಃ ನ.ರಾ.ಪುರ,
ಸಂಚಾರಿ ನ್ಯಾಯಾಲಯ, ಕೊಪ್ಪ.

ಸಾಕ್ಷಿದಾರರ ಸಹಿಃ